ಕಥೆ

# ಬ್ಯಾಂಡ್, ಬಾಜಾ, ಬಾರಾತ್





ಗೀತಾ ಕುಂದಾಪುರ

ಕಲೆ: ಎಸ್.ವಿ.ಹೂಗಾರ್

'ಅವನಿ ರೆಸಾರ್ಟ್'ನಲ್ಲಿ 'ಅಲಕಾ ವೆಡ್ಸ್ ಆಕಾಶ್' ಎಂದು ಬರೆದ ದೊಡ್ಡ ಬೋರ್ಡು ದೂರದವರೆಗೂ ಕಾಣಿಸುತ್ತಿತ್ತು.

'ಡಾರ್ಲಿಂಗ್... ಆಯ್ತಾ ನಿನ್ನ ಡ್ರೆಸ್? ಯಾವ ಬಣ್ಣದ ಸೀರೆ ಉಟ್ಕೋತಿಯಾ? ಅದೇ ಬಣ್ಣದ ಕಾರಲ್ಲೇ ಹೋಗೋಣ'

'ಪರು... ನಾನು ರೆಡ್ ಕಲರ್ ಸಾರಿ ಉಡೋಕೆ ಹೊರಟಿದ್ದೀನಿ, ಆದ್ರೆ ಮ್ಯಾಚಿಂಗ್ ನೆಕ್ಲೆಸ್ ಸಿಗ್ತಾ ಇಲ್ಲ, ನೀನು ನೋಡಿದಿಯಾ?'

'ಅಯ್ಯೋ... ನೆಕ್ಲೆಸ್ ಅಲ್ಲೇ ಎಲ್ಲೋ ಇಟ್ಟಿರಬಹುದು, ಆದ್ರೆ ನನ್ನ ಕೆಂಪು ಕಾರನ್ನ ಸರ್ವಿಸಿಗೆ ಬಿಟ್ಟಿದ್ದೀನಿ, ಬಿಳಿ ಕಾರು ಓಕೆನಾ? ನಮ್ಮ ಡ್ರೈವರ್ ಇಬ್ರೂ ರಜೆ ಮೇಲಿದ್ದಾರೆ, ನಾನೇ ಡ್ರೈವ್ ಮಾಡ್ತೀನಿ ಬಿಡು, ನಿಂಗೋಸ್ಕೋರ ಅಷ್ಟೂ ಮಾಡೊಕಾಗೋಲ್ವಾ...'

ರೆಸಾರ್ಟಿನ ಹಾಲಿನಲ್ಲಿ ಸುಜಾತ ಮತ್ತು ಪರಮೇಶ್ವರ ತಮಾಷೆಯಾಗಿ ಮಾತಾಡುತ್ತಾ ನಿಂತಿದ್ದರು, ಅಷ್ಟರಲ್ಲಿ ಮ್ಯಾನೇಜರ್ ಲೋಬೋವಿನ ಕರ್ಕಶ ಸ್ವರ ಕಿವಿಗಪ್ಪಳಿಸಿತು...

'ಸೂ... ಮಕ್ಕಳಾ ನಿಮ್ಗೆ ಹೇಳೋರು, ಕೇಳೋರೂ ಯಾರೂ ಇಲ್ವ, ಹಾಡು ಹಗಲಲ್ಲೇ ರೊಮ್ಯಾನ್ಸ್, ಸುಮ್ನೆ ಬಿಟ್ರೆ ಇಲ್ಲೇ ಮಕ್ಕಳನ್ನೂ ಮಾಡ್ತೀರಾ, ನಿಮ್ಮ ಕೆಲ್ಸ ಮೊದ್ಲು ಮಾಡಿ ಹೋಗಿ'.

ಹತ್ತಿರ ನಿಂತು ಮಾತಾಡುತ್ತಿದ್ದವರು ದೂರವಾದರು. ಅವಳು ಬಿರಬಿರನೆ ನಡೆದು ಹೋದಳು, 'ಛೇ... ಬಡವರಿಗೆ ನಗು, ಮಾತು ಎರಡೂ ದುಬಾರಿ, ಹಸಿವು, ಅವಮಾನಗಳಿಂದಲೇ ಹೊಟ್ಟೆ ತುಂಬಿಸಿಕೊಳ್ಳಬೇಕು' ಕೆನ್ನೆಗಿಳಿದ ಕಣ್ಣೀರನ್ನು ಸೆರಗಿನಿಂದ ಒರೆಸಿಕೊಳ್ಳುವಾಗ ಅವಳುಟ್ಟ ಸೀರೆಯ ಸೆರಗು ಹರಿಯಿತು, ಸೀರೆಯನ್ನು ಸಿಟ್ಟಿನಿಂದ ನೋಡಿದಳು. ಪರಮೇಶ್ವರ ಅಲ್ಲಿನ ಡೆಕೊರೇಶನ್ ಕೆಲಸ ಶುರು ಮಾಡಿದ. ಅಂದಿನ ಮದುವೆಯ ರಿಸೆಪ್ಶನ್ ಥೀಮ್ ಅರಮನೆ. ಅವನು ಒಂದೊಂದೇ ಕಂಬಗಳನ್ನು ಎತ್ತಿ ತಂದು ಸ್ಟೇಜಿನ ಮೇಲೆ ನಿಲ್ಲಿಸಿದ, ಹುಡುಗರಿಬ್ಬರು